c) BAER: BRAIN STEM AUDITORY EVOKED RE
injury of auditory pathway, evaluation of patients w

ಕನ್ನಡಪ್ರಭ
20 ಅಕ್ಟೋಬರ್ 2014
ಸೋಮವಾರ

**ಜನಿಸುವಾಗ ಅಥವಾ ಐದು ವರ್ಷದೊಳಗಿನ ಮಕ್ಕಳಲ್ಲಿ ಸೆರೆಬ್ರಲ್ ಪಾಲ್ಸಿ ಕಾಣಿಸಬಹುದು. ಬೆಂಗಳೂರಲ್ಲಿ ಈ ಸಮಸ್ಯೆಗೆ ಚಿಕಿತ್ಸೆ ನೀಡುವ ಏಕೈಕ ಕೇಂದ್ರವಿದ್ದು, ಕಳೆದ 15 ವರ್ಷಗಳಲ್ಲಿ 12,000 ಪ್ರಕರಣಗಳು ದಾಖಲಾಗಿವೆ. ಆದ್ದರಿಂದ ಇದನ್ನು ಗಂಭೀರ ಸಮಸ್ಯೆಯೆಂದೇ ಪರಿಗಣಿಸಲಾಗುತ್ತಿದೆ.**

# ಸೆರೆಬ್ರಲ್ ಪಾಲ್ಸಿ




• ಡಾ. ಸುರೇಶ್ ರಾವ್

ಭಾರತದಲ್ಲಿ ಸುಮಾರು 25 ಲಕ್ಷಕ್ಕೂ ಹೆಚ್ಚು ಮಕ್ಕಳು ಮೆದುಳು ಪಾರ್ಶ್ವವಾಯುವಿನಿಂದ (ಸೆರೆಬ್ರಲ್ ಪಾಲ್ಸಿ-ಸಿಪಿ) ಬಳಲುತ್ತಿದ್ದಾರೆ. ಜನಿಸುವ 1000ದಲ್ಲಿ ಎರಡು ಮಕ್ಕಳಿಗೆ ಈ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ.

ಮೆದುಳು ಪಾರ್ಶ್ವವಾಯು ರೋಗಿಗಳಲ್ಲಿ ಮಾಂಸಖಂಡಗಳ ಗಡುಸುತನ, ಶಕ್ತಿಹೀನತೆ, ಹೊಂದಾಣಿಕೆ ಕೊರತೆ, ಅನಿಯಂತ್ರಿತ ಚಲನೆ ಹಾಗೂ ದೇಹದ ಮೇಲಿನ ನಿಯಂತ್ರಣ ಇಲ್ಲದಂತಾಗುತ್ತದೆ. ಈ ಸಮಸ್ಯೆ ಇರುವ ಮಕ್ಕಳಲ್ಲಿ ದೃಷ್ಟಿಹೀನತೆ, ಕಿವುಡು ಹಾಗೂ ಮೂಕತನದೊಂದಿಗೆ ಕಲಿಕಾ ಸಾಮರ್ಥ್ಯ ಕ್ಷೀಣಿಸಬಹುದು. ಶೇ.32ರಷ್ಟು ಮೆದುಳು ಪಾರ್ಶ್ವವಾಯುಪೀಡಿತ ಮಕ್ಕಳಲ್ಲಿ ಮಾನಸಿಕ ಬೆಳವಣಿಗೆ ಕುಂಠಿತವಾಗಿರುತ್ತದೆ. ಶೇ.50ರಷ್ಟು ಮಕ್ಕಳಲ್ಲಿ ಮೂರ್ಛೆರೋಗ, ಶೇ.18ರಷ್ಟು ಮಕ್ಕಳಲ್ಲಿ ಮಾತನಾಡಲು ಸಾಧ್ಯವಾಗದ ಹಾಗೂ ಶೇ.12ರಷ್ಟು ಪ್ರಕರಣದಲ್ಲಿ ಮಕ್ಕಳು ಕಿವುಡು ಸಮಸ್ಯೆಯಿಂದ ಬಳಲುತ್ತಾರೆ.

ಮಗು ಜನಿಸುವಾಗ ಮೆದುಳಿಗೆ ಅಗತ್ಯದಷ್ಟು ರಕ್ತ ಹಾಗೂ ಆಮ್ಲಜನಕ ಪೂರೈಕೆಯಾಗದಿದ್ದಲ್ಲಿ, ಮಾನಸಿಕ ರೋಗ, ರುಬೆಲ್ಲಾ ಹಾಗೂ ಮೆನಿಂಜೈಟಿಸ್ ಸೋಂಕು, ಚಯಾಪಚಯ ಹಾಗೂ ಅನುವಂಶಿಕ ಅಸ್ವಸ್ಥತೆ, ಮೆದುಳಿನ ಅಸಹಜ ಬೆಳವಣಿಗೆ, ಅಪೂರ್ಣ ಬೆಳವಣಿಗೆಯ ಶಿಶು ಜನನ, ತಲೆಗೆ ಗಾಯ ಹಾಗೂ ವಿಷಕಾರಿ ಅಂಶಗಳಿಂದಲೂ ಸಿಪಿ ಬರಬಹುದು.

## ಗುಣ ಲಕ್ಷಣಗಳು

ಆರಂಭದಲ್ಲೇ ಈ ಸಮಸ್ಯೆಯನ್ನು ಗುರುತಿಸೋದು ಕಷ್ಟ. ಮತ್ತೆ ಕೆಲವು ಪ್ರಕರಣಗಳಲ್ಲಿ ಪೋಷಕರೇ ಈ ರೋಗ ಲಕ್ಷಣಗಳನ್ನು ನಿರ್ಲಕ್ಷಿಸುತ್ತಾರೆ. ಮಕ್ಕಳು ನಗಲು ನಿಧಾನಿಸುವುದು, ಯಾರನ್ನೂ ಗುರುತಿಸುವುದೇ ಇರುವುದು, ಭಾಷೆ ಮತ್ತು ಇತರ ಚಟುವಟಿಕೆಗಳಲ್ಲಿ ನಿಧಾನವಾಗಿದ್ದರೆ ಪೋಷಕರು ಜಾಗರೂಕರಾಗಬೇಕು.

- ಮಗುವಿಗೆ ಹತ್ತು ವಾರಗಳಾದರೂ ಕಣ್ಣಿನ ಸ್ಥಿರೀಕರಣ ಸಾಧ್ಯವಾಗುವುದಿಲ್ಲ.
- 3 ತಿಂಗಳಲ್ಲಿ ತಲೆ ಹಾಗೂ ಕುತ್ತಿಗೆ ನಿಲ್ಲುವುದಿಲ್ಲ.
- ನಾಲ್ಕು ತಿಂಗಳಾದರೂ ವಸ್ತುಗಳನ್ನು ಎಳೆಯಲು ಯತ್ನಿಸುವುದಿಲ್ಲ.
- ಆರು ತಿಂಗಳಾದರೂ ಕವಚಿಕೊಳ್ಳದಿರುವುದು.
- ಇತರೆ ಅಸಹಜ ಲಕ್ಷಣಗಳು ಕಾಣಿಸಿದಲ್ಲಿ ವೈದ್ಯರನ್ನು ಸಂಪರ್ಕಿಸಿ.

## ಮುನ್ನೆಚ್ಚರಿಕೆ ಮುಖ್ಯ

ಒಮ್ಮೆ ಮಗು ಸಿಪಿಯಿಂದ ಬಳಲಿದರೆ ಜೀವನ ಪೂರ್ತಿ ಅನುಭವಿಸಬೇಕಾಗುತ್ತದೆ. ಗುಣಪಡಿಸಲು ಯಾವ ಚಿಕಿತ್ಸೆಯೂ ಇಲ್ಲ. ಹೀಗಾಗಿ ಈ ಸಮಸ್ಯೆ ತಲೆದೋರದಂತೆ ಎಚ್ಚರಿಕೆ ವಹಿಸಬೇಕು.

ವೈದ್ಯರ ಸಲಹೆಯಂತೆ ಪ್ರಸವಪೂರ್ವ ಆರೈಕೆ ಅತ್ಯಗತ್ಯ. ತಮ್ಮಿಷ್ಟದಂತೆ ಯಾವುದೇ ಔಷಧಿಯನ್ನೂ ಗರ್ಭಿಣಿಯರು ತೆಗೆದುಕೊಳ್ಳಬಾರದು. ಗರ್ಭಿಣಿ ಮಧುಮೇಹ, ಅನೀಮಿಯಾ, ಅಧಿಕ ಬಿಪಿ, ಪೌಷ್ಟಿಕಾಂಶದ ಕೊರತೆ ಹಾಗೂ ಇತರೆ ಯಾವುದೇ ರೋಗದಿಂದ ಬಳಲುತ್ತಿದ್ದಲ್ಲಿ, ಇದು ಗರ್ಭದಲ್ಲಿರುವ ಮಗುವಿನ ಮೆದುಳಿನ ಮೇಲೆ ದುಷ್ಪರಿಣಾಮ ಬೀರಬಲ್ಲದು. ಶಿಶು ಜನನದ ನಂತರವೂ ಮಗುವಿಗೆ ಸೋಂಕಾಗದಂತೆ ಮುತುವರ್ಜಿ ವಹಿಸಬೇಕು. ಮಕ್ಕಳು ಬಿದ್ದಾಗ ತಲೆಗೆ ಬಲವಾದ ಏಟಾಗದಂತೆ ನೋಡಿಕೊಳ್ಳಬೇಕು. ಇದು ನರಮಂಡಲದ ಮೇಲೆ ಪ್ರಭಾವ ಬೀರಬಹುದು.

## ಚಿಕಿತ್ಸೆ ಏನು?

ಸಿಪಿಯನ್ನು ಗುಣಪಡಿಸಲಾಗದೇ ಹೋದರೂ, ಸಮಸ್ಯೆ ಗಂಭೀರವಾಗುವುದನ್ನು ತಡೆಯಬಹುದು. ಬಹು ಸಮಸ್ಯೆಗಳಿಂದ ಬಳಲುತ್ತಿದ್ದರೆ ಮಲ್ಟಿಡಿಸಿಪ್ಲಿನರಿ ಚಿಕಿತ್ಸೆ ಅಗತ್ಯ. ಇದರಲ್ಲಿ ಫಿಸಿಯೋಥೆರಪಿ, ಆಕ್ಯುಪೇಷನಲ್ ಥೆರಪಿ, ಸ್ಪೀಚ್ ಥೆರಪಿ, ವಾಟರ್ ಥೆರಪಿ ನೀಡಬಹುದು. ನೋವು ನಿವಾರಣೆ ಅಥವಾ ಮಾಂಸಖಂಡಗಳ ಸೆಳೆತ ತಗ್ಗಿಸುವುದು, ಅಸಹಜತೆಯ ನಿವಾರಣೆಗೆ ಚಿಕಿತ್ಸೆ ನೀಡುವ ಅಥವಾ ಮಾಂಸಖಂಡಗಳ ಹಿಡಿತವನ್ನು ಶಸ್ತ್ರಚಿಕಿತ್ಸೆ ಮೂಲಕ ಸಡಿಲಗೊಳಿಸಲಾಗುವುದು. ಕೀಲಿನ ಸಮಸ್ಯೆಗೆ ಸಾಧನಗಳನ್ನು ಅಳವಡಿಸಿ, ಮಾಂಸಖಂಡಗಳ ಸೂಕ್ತ ಚಲನೆ ಹಾಗೂ ಶಕ್ತಿ ಪಡೆದುಕೊಳ್ಳಲು ಸೂಕ್ತ ವ್ಯಾಯಾಮ ಹೇಳಿ ಕೊಡಲಾಗುವುದು. ಸಮಸ್ಯೆ ಮುಂದುವರಿದಲ್ಲಿ ಬೊಟೊಕ್ಸ್ ಇಂಜೆಕ್ಷನ್ ನೀಡಿ, ಮಾಂಸಖಂಡಗಳನ್ನು ಹಿಗ್ಗಿಸಲಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ದೈಹಿಕ ತೊಂದರೆಯಿಂದ ಬಳಲುವ ಮಗು ಮಾನಸಿಕವಾಗಿ ಕುಗ್ಗದಂತೆ ಪೋಷಕರು ಎಚ್ಚರವಹಿಸಬೇಕು.

(ಲೇಖಕರು ಪರಿಜ್ಞಾ ನ್ಯೂರೋಡಯೋಗ್ನಾಸ್ಟಿಕ್ ರಿಹ್ಯಾಬಿಟೇಷನ್ ಸೆಂಟರ್‌ನ ನಿರ್ದೇಶಕರು ಹಾಗೂ ಶಿಶು ನರವಿಜ್ಞಾನ ತಜ್ಞರು. ಸಂಪರ್ಕಿಸಿ: 080-22238534, 22243640).